# ಕನ್ನಡಾಭಿಮಾನ

ಕನ್ನಡ ನುಡಿಗಾಗಿಯೇ ಕನ್ನಡಿಗರ ಭಾಷಾಭಿಮಾನ ಹೆಚ್ಚು ಸಲ ಪ್ರಕಟಗೊಳ್ಳುವುದು ತಿಳಿದಿರುವ ವಿಚಾರ. ನಾಡಿನ ಭಾಷೆಗೆ ಅನ್ಯಭಾಷಿಕರಿಂದ ಧಕ್ಕೆ ಬಂದಾಗ ಈ ರೀತಿ ನಮ್ಮ ಭಾಷಾಭಿಮಾನ ವ್ಯಕ್ತವಾಗುವುದು ಸಹಜವೇ. ಇದನ್ನು ನಿರಾಕರಿಸುವ ಹಾಗಿಲ್ಲ. ಆದರೆ, ಹೀಗೆ ನಮ್ಮ ನಾಡಿನ ಬಗ್ಗೆ ನಮಗಿರುವ ಹೆಮ್ಮೆ ಮತ್ತು ಅಭಿಮಾನ ಕೇವಲ ಭಾಷೆಗೆ ಮಾತ್ರ ಸೀಮಿತಗೊಳಿಸಿಕೊಂಡಿದ್ದೇವೆ. ಭಾಷೆಯ ಆಚೆಗೂ ನಾಡಿನ ಅಭಿಮಾನವನ್ನು ವ್ಯಕ್ತಗೊಳಿಸುವ ಅನೇಕ ಕ್ಷೇತ್ರಗಳಿವೆ ಎಂಬುದನ್ನು ನಾವು ಮರೆತಿದ್ದೇವೆ ಎನ್ನುತ್ತದೆ ಅನೇಕ ಚಿಂತಕರ ಬರಹಗಳು. ಕನ್ನಡ ಕಲಿಯದೇ ನಾವು ಕರ್ನಾಟಕದಲ್ಲಿ ಬದುಕಲಾಗುವುದಿಲ್ಲ ಎನ್ನುವುದರ ಬಗ್ಗೆ ಅನ್ಯಭಾಷಿಕರಿಗೆ ಅರಿವು ಮೂಡಿಸಬೇಕಾಗಿರುವುದು ಎಲ್ಲ ಕನ್ನಡಿಗರ ಮೊದಲ ಕರ್ತವ್ಯ.

ಮುಂದಿನ ದಿನಗಳಲ್ಲಿ ಸುಮಾರು 40,000ಕ್ಕೂ ಹೆಚ್ಚು ಕನ್ನಡ ಶಾಲೆಗಳು ಮುಚ್ಚಲಾಗುತ್ತಿವೆ ಎಂದು ವರದಿಯೊಂದು ತಿಳಿಸುತ್ತದೆ. ಹಾಗಾದರೆ, ಕನ್ನಡ ಶಾಲೆಗಳನ್ನೇ ನೆಚ್ಚಿಕೊಂಡಿರುವ ಹಳ್ಳಿಗಾಡಿನ ದುರ್ಬಲ ಸಮುದಾಯಗಳ ಶಿಕ್ಷಣದ ಗತಿ? ಕನ್ನಡ ಶಾಲೆಗಳ ಸ್ಥಿತಿಗಳನ್ನು ನೋಡಿದರೆ ಸಾಕು ನಮ್ಮ ಕನ್ನಡಾಭಿಮಾನ ಎಷ್ಟು ಪೊಳ್ಳು ಎನಿಸುತ್ತದೆ. ಕನ್ನಡ ಶಾಲೆಗಳೇ ಇಲ್ಲದೆ ನಾವು ಕನ್ನಡಾಭಿಮಾನವನ್ನು ಕೇವಲ ಘೋಷಣೆಗಳಲ್ಲಿ ಮೊಳಗಿಸುವುದು ಎಷ್ಟು ಸರಿ! ಸರ್ಕಾರಿ ಶಾಲೆಗಳೆಂದರೆ ಬಡವರು, ದುರ್ಬಲರು ಹಾಗೂ ಹಳ್ಳಿಗಾಡಿನವರಿಗೆ ಮೀಸಲು ಎಂದಾಗಿರುವುದು ಮೇಲು ಮತ್ತು ಕೀಳು ಎಂಬುದರ ಇನ್ನೊಂದು ರೂಪವೇ ಆಗಿದೆ. ಸಮಾನತೆ ಮತ್ತು ಜ್ಞಾನದ ಹೆಸರಿನಲ್ಲಿ ಶಿಕ್ಷಣವನ್ನು ನೀಡಲಾಗುತ್ತದೆ. ಆದರೆ ವಾಸ್ತವ ಏನೆಂದರೆ, ಬೋಧಿಸುವ ಶಿಕ್ಷಣ ಕ್ರಮದಲ್ಲೇ ಅಸಮಾನತೆ ಇರುವುದು ದುರದೃಷ್ಟಕರ. ಭಾರತದಲ್ಲಿ ಶಿಕ್ಷಣವೆಂಬುದು ವಿಭಜಿತವಾಗಿದೆ. ಒಂದು ಬಡವರಿಗಾಗಿ ಇರುವ ಶಾಲೆಗಳು, ಇನ್ನೊಂದು ಶ್ರೀಮಂತ ವರ್ಗದವರಿಗಾಗಿ ಇರುವ ಶಾಲೆಗಳು. ಇವೆರಡನ್ನೂ ತೌಲನಿಕವಾಗಿ ನೋಡಿದಾಗ ಶಿಕ್ಷಣದಲ್ಲಿರುವ ಅಸಮಾನತೆ ಎದ್ದುಕಾಣುತ್ತದೆ. ಸ್ಥಳೀಯತೆ, ವೈವಿಧ್ಯ ಹಾಗೂ ಎಲ್ಲರಿಗೂ ಒಂದೇ ರೀತಿಯ ಶಿಕ್ಷಣ ಎಂದು ತಿಳಿದಿರುವ ಚಿಂತಕರು, ತಜ್ಞರು ರೂಪಿಸಿರುವ ಯೋಜನೆಗಳನ್ನು ಜಾರಿಗೊಳಿಸಲು ಹಾಗೂ ಶಾಲೆಗಳ ಗುಣಾತ್ಮಕ ಬೋಧನೆಯ ಬಗ್ಗೆ ಧ್ವನಿಯೆತ್ತುವುದು ಕೂಡ ಕನ್ನಡದ ಬಲವರ್ಧನೆಯೇ ಆಗಿರುತ್ತದೆ.

ಕರ್ನಾಟಕದಲ್ಲಿರುವ ಯಾವ ವಿಶ್ವವಿದ್ಯಾಲಯವೂ ಕೂಡ ಅಂತರರಾಷ್ಟ್ರೀಯ ಗುಣಮಟ್ಟದಲ್ಲಿ ಇಲ್ಲ ಎಂಬುದನ್ನು ವರದಿಗಳು ಹೇಳುತ್ತಿವೆ. ಖಾಸಗಿ ಮತ್ತು ಡೀಮ್ಡ್ ವಿಶ್ವವಿದ್ಯಾಲಯಗಳು ತಲೆಯೆತ್ತುತ್ತಿರುವುದನ್ನು ನೋಡಿದರೆ, ವಿಶ್ವವಿದ್ಯಾಲಯಗಳ ಮೂಲ ಉದ್ದೇಶವೇ ತೆರೆಮರೆಗೆ ಸರಿದಂತೆ ಕಾಣುತ್ತಿದೆ. ಗುಣಾತ್ಮಕವಲ್ಲದ ಸಂಶೋಧನಾ ಬರಹಗಳು, ವೈವಿಧ್ಯ, ಜಾತ್ಯತೀತ ಮತ್ತು ಬಹುತ್ವವನ್ನು ಗೌರವಿಸದ ಪಠ್ಯಗಳು ನಿರಾಸೆ ಹುಟ್ಟಿಸುತ್ತವೆ. ಅಲ್ಲಿರುವ ಬೋಧನಾಂಗ ಮತ್ತು ಪ್ರಸಾರಾಂಗಗಳ ಸ್ವರೂಪವಂತೂ ನೆಲಕಚ್ಚಿದೆ. ಇದನ್ನು ನೋಡಿಯೂ ಮೌನವಾಗಿರುವುದು ಕನ್ನಡಾಭಿಮಾನವಲ್ಲ. ಇದು ಕತ್ತಿಯ ಬಗ್ಗೆ ಮಾತನಾಡದೆ; ಬರಿ ಒರೆಯ ಬಗ್ಗೆ ಮಾತನಾಡಿದಂತೆ!

ಸುಮಾರು 240 ಎಕರೆ ವಿಸ್ತಾರವಿರುವ ಬೆಂಗಳೂರಿನ ಲಾಲ್‌ಬಾಗ್‌ನಲ್ಲಿ ಸುಮಾರು 2150ಕ್ಕೂ ಹೆಚ್ಚು ಪ್ರಭೇದದ ಸಸ್ಯ ಸಂಪತ್ತಿದೆ. ಹಾಗೆಯೇ ವಿವಿಧ ಜಾತಿಯ ವೃಕ್ಷಗಳಿವೆ. ಇವೆಲ್ಲವೂ ಬೆಂಗಳೂರಿನ ವಾತಾವರಣವನ್ನು ಹೆಚ್ಚು ಕಲುಷಿತವಾಗದಂತೆ ತಡೆಯುತ್ತಿವೆ ಎನ್ನುವುದನ್ನು ಸಂಶೋಧನೆಗಳು ಹೇಳುತ್ತಿವೆ. ಸುಮಾರು 255 ವರ್ಷ ಹಳೆಯದಾದ ಲಾಲ್‌ಬಾಗ್‌ನಲ್ಲಿ ಜೋಡಿ ಸುರಂಗ ರಸ್ತೆಯ ನಿರ್ಮಾಣಕ್ಕೆ ಸರ್ಕಾರ ಈಗ ಕೈ ಹಾಕಿದೆ. ಇವೆಲ್ಲವೂ ಅಭಿವೃದ್ಧಿಯ ಅಂತಿಮ ಮಾರ್ಗ ಎಂದು ಹೇಳಲಾಗುತ್ತಿದೆ. ಇದರೊಂದಿಗೆ ಅಭಿವೃದ್ಧಿಯ ಜೊತೆ ಸ್ಥಳೀಯ ಸಾಂಸ್ಕೃತಿಕ ಅಸ್ಮಿತೆಗಳು ತಮ್ಮ ಉಳಿವಿಗಾಗಿ ಸದಾ ಪರಸ್ಪರ ಗುದ್ದಾಡುತ್ತಿರುತ್ತವೆ. ಜನತೆಯ ವಿರೋಧವನ್ನು ಕಡೆಗಣಿಸಿ ನಡೆಯುತ್ತಿರುವ ಈ ಯೋಜನೆಯಿಂದ ಯಾರಿಗೆ ಲಾಭ! ಅಧಿಕಾರ ಎಂದರೆ ತಾವು ರೂಪಿಸುವ ಯೋಜನೆಗಳಿಗೆ ಜನರಿಂದ ಒಪ್ಪಿಗೆ ಪಡೆಯುವುದು ಎಂಬಂತಾಗಿದೆ. ಬೆಂಗಳೂರು ನಗರದ ಆತ್ಮದಂತಿರುವ ಈ ಉದ್ಯಾನವನದ ಪರವಾಗಿ ಧ್ವನಿಯೆತ್ತುವುದೂ ಕೂಡ ಕನ್ನಡ ಭಾಷೆಯ ಬಗ್ಗೆ ನಾವು ತೋರುವ ಅಭಿಮಾನದಷ್ಟೇ ದೊಡ್ಡದು.

ಕನ್ನಡ ಜನತೆಯ ಬೇಡಿಕೆಯಾದ ಮಹಾದಾಯಿ ಮತ್ತು ಕಳಸಾ ಬಂಡೂರಿ ಯೋಜನೆಯ ಜಾರಿಗೆ ದಶಕಗಳಿಂದ ರೈತ ಸಮುದಾಯ ಹೋರಾಟ ಮಾಡುತ್ತಿದೆ. ಕರ್ನಾಟಕದ ಹಲವಾರು ಕಡೆ ರೈತರ ಭೂಮಿಯನ್ನು ಕಸಿದುಕೊಳ್ಳುವ ಪ್ರಯತ್ನಗಳೂ ನಡೆಯುತ್ತಿವೆ. ಪ್ರಕೃತಿ ನಮಗೆ ಉಡುಗೊರೆಯಾಗಿ ನೀಡಿರುವ ಪಶ್ಚಿಮಘಟ್ಟಗಳಲ್ಲಿ ವಿವೇಚನೆಯಿಲ್ಲದೆ ಕೈಗೊಳ್ಳುತ್ತಿರುವ 'ಅಭಿವೃದ್ಧಿ' ಯೋಜನೆಗಳು ಅಲ್ಲಿನ ಅಪಾರವಾದ ಜೀವವೈವಿಧ್ಯಕ್ಕೆ ಎರವಾಗುತ್ತವೆ. ಇಂತಹ ಅಪಾರವಾದ ಪ್ರಕೃತಿ ಸಂಪತ್ತನ್ನು ಕಳೆದುಕೊಂಡರೆ ಭವಿಷ್ಯದ ದಿನಗಳಲ್ಲಿ ಈ ನಾಡು ಬರಡಾಗುತ್ತಿದೆ ಎನ್ನುವುದನ್ನು ಪರಿಸರ ಚಿಂತಕರು, ಹೋರಾಟಗಾರರು ಅನೇಕ ದಶಕಗಳಿಂದ ಅಂಕಿ–ಅಂಶಗಳ ಮೂಲಕ ಎಚ್ಚರಿಸುತ್ತಿದ್ದಾರೆ. ಹಾಗಾದರೆ ವ್ಯವಸ್ಥೆ ರೂಪಿಸುತ್ತಿರುವ ಅಭಿವೃದ್ಧಿಯ ಯೋಜನೆಗಳು ಯಾರನ್ನು ಬದುಕಿಸಲೆಂದು ನಿರ್ಮಾಣವಾಗುತ್ತಿವೆ? ಇವುಗಳನ್ನು ತಾತ್ವಿಕವಾಗಿ ವಿರೋಧಿಸುವುದು ಕನ್ನಡಾಭಿಮಾನದ ಮುಂದುವರೆದ ಭಾಗವೇ. ಈ ಅಭಿಮಾನದೊಂದಿಗೆ ಸಾಹಿತ್ಯ, ಕಲೆ ಮತ್ತು ಸಾಂಸ್ಕೃತಿಕ ವೈವಿಧ್ಯವನ್ನೂ ಸೇರಿಸಿಕೊಳ್ಳೋಣ. ಅವಸಾನಗೊಳ್ಳುತ್ತಿರುವ ನಾಡಿನ ಜಲ, ಮಣ್ಣು, ಕೃಷಿಯ ಮತ್ತು ಕನ್ನಡ ನಾಡಿನಲ್ಲೇ ಇರುವ ಅನೇಕ ಸಂಸ್ಕೃತಿಗಳ ಬಗ್ಗೆಯೂ ದನಿಗೂಡಿಸಬೇಕಿದೆ. ಇದನ್ನೆಲ್ಲಾ ಒಪ್ಪುವವರು ವಿರಳ ಸಂಖ್ಯೆಯಲ್ಲಾದರೂ ಇರಬಹುದು! ಇದ್ದರೂ ಅವರಲ್ಲಿ ಸ್ವೀಕರಿಸುವವರು ಕೆಲವೇ ಜನರು ಮಾತ್ರ!

ಹೀಗೆ ಶಿಕ್ಷಣ ತಜ್ಞರು, ಭಾಷಾ ವಿಜ್ಞಾನಿಗಳು, ರೈತ ಸಮುದಾಯ, ನೀರಾವರಿ ತಜ್ಞರು, ಪರಿಸರ ಚಳವಳಿಯ ಹೋರಾಟಗಾರರು ಈ ನಾಡಿನ ಅಭಿವೃದ್ಧಿಗೆ ಪೂರಕವಾಗಬಹುದಾದ ಹಲವಾರು ರೀತಿಯ ಒಳನೋಟಗಳನ್ನು ನೀಡಿದ್ದಾರೆ. ಅವರು ನೀಡಿರುವ ಸಾಧಿಸಬಹುದಾದ ಯೋಜನೆಗಳ ಮುಂದೆ, ಈಗ ರೂಪಿತವಾಗುತ್ತಿರುವ ಯೋಜನೆಗಳು ಹೇಗೆ ಭವಿಷ್ಯದಲ್ಲಿ ಮಾರಕವಾಗುತ್ತವೆ ಎಂಬುದನ್ನು ಜನರಿಗೆ ಮನದಟ್ಟು ಮಾಡಿಕೊಡುವುದು ನಿಜವಾದ ನಾಡು–ನುಡಿಯ ಅಭಿಮಾನವೇ ಆಗುತ್ತದೆ. ಆಗ 'ಕನ್ನಡಕ್ಕಾಗಿ ಕೈಯೆತ್ತು; ನಿನ್ನ ಕೈ ಕಲ್ಪವೃಕ್ಷವಾಗುತ್ತದೆ! ಕನ್ನಡಕ್ಕಾಗಿ ಕೊರಳೆತ್ತು; ಅಲ್ಲಿ ಪಾಂಚಜನ್ಯ ಮೂಡುತ್ತದೆ' (ಕುವೆಂಪು). ಆಗ ನಾವು ಎಲ್ಲಿದ್ದರೂ, ಹೇಗಿದ್ದರೂ ನಿಜವಾದ ಕನ್ನಡಿಗರಾಗಿರುತ್ತೇವೆ.

■ **ಜಿ.ವಿ. ಆನಂದಮೂರ್ತಿ**

## ಮಾತೇ ಮುತ್ತು

- ನಾವೇ ಅರಸು ನಾವೇ ಆಳು. ಇಂತಾದೊಡನೆಯೇ ಮುಗಿಯುವುದು ಗೋಳು.
  —ಪುತಿನ
- ರಾಜಕೀಯ ಅನ್ನುವುದು ಒಂದು ಶಾಸ್ತ್ರ ಹಾಗೂ ಕಲೆ.
  —ಲೆನಿನ್
- ಉಪಕಾರಕ್ಕೆ ಪ್ರತ್ಯುಪಕಾರ ಮಾಡುವುದು ಮಾನವ ಗುಣ, ಅಪಕಾರ ಎಸಗುವುದು ಪಿಶಾಚಿ ಗುಣವಯ್ಯ.
  —ಸಿದ್ದಯ್ಯ ಪುರಾಣಿಕ
- ಲೋಕಕ್ಕೋಸ್ಕರ ಮತವೇ ಹೊರತು, ಮತಕ್ಕೋಸ್ಕರ ಲೋಕವಲ್ಲ.
  —ಡಿವಿಜಿ
- ಪ್ರಜಾಪ್ರಭುತ್ವದಲ್ಲಿ ಬಲಿಷ್ಠನಿಗೆ ಇರುವಷ್ಟೇ ಅವಕಾಶಗಳು ದುರ್ಬಲನಿಗೂ ಇರಬೇಕು.
  —ಮಹಾತ್ಮ ಗಾಂಧಿ
- ನುಡಿಯಲ್ಲಿ ಎಚ್ಚತ್ತು ನಡೆಯಲ್ಲಿ ತಪ್ಪಿದರೆ ಹಿಡಿದಿರ್ದ ಲಿಂಗವು ಘಟಸರ್ಪದಂತೆ!
  —ಬಸವಣ್ಣ
- ನೆನಹು ಬಾಳಿನ ಬುತ್ತಿ, ಅನುಭವಗಳ ಅಕ್ಷಯ ನಿಧಿ.
  —ಕುವೆಂಪು